ಸೆಲೆಬ್ರಿಟಿ

■ ಹನಿ

# ಜೆಸ್ಸಿಯ ಕುಡಿತ!



ರಾತ್ರಿ ಬೆಳಗಾಗುವುದರೊಳಗೆ ದೊಡ್ಡ ಮಟ್ಟದ ಖ್ಯಾತಿ ಮತ್ತು ಅಪಾರ ಹಣವನ್ನು ಕಾಲಬುಡಕ್ಕೆ ತಂದು ಹಾಕುವ ಕ್ರಿಕೆಟ್‌ನಲ್ಲಂತೂ ಶಿಸ್ತುಬದ್ಧ ಜೀವನಕ್ಕೆ ಹೆಚ್ಚು ಮಹತ್ವವಿದೆ. ಜನಪ್ರಿಯ ಕ್ರಿಕೆಟಿಗನೊಬ್ಬ ಸ್ವಲ್ಪ ಉಡಾಫೆಯಿಂದ ವರ್ತಿಸಿದರೂ ದೊಡ್ಡ ಸುದ್ದಿಯಾಗುತ್ತದೆ. ಕುಡಿತದ ಚಟ ನ್ಯೂಜಿಲೆಂಡಿನ ಪ್ರತಿಭಾವಂತ ಆಟಗಾರ ಜೆಸ್ಸಿ ರೈಡರ್‌ನ ವೃತ್ತಿ ಜೀವನವನ್ನೇ ಕೊನೆಗೊಳಿಸುವ ಅಪಾಯದ ಗಂಟೆ ಬಾರಿಸಿರುವುದು ಇದಕ್ಕೆ ಹೊಸ ಉದಾಹರಣೆ. ಕ್ರೈಸ್ಟ್‌ಚರ್ಚ್‌ನಲ್ಲಿ ಬಾರ್ ಒಂದರ ಹೊರಗೆ ಮಧ್ಯರಾತ್ರಿ ನಡೆದ ಗಲಾಟೆಯಲ್ಲಿ ನಾಲ್ಕೈದು ಮಂದಿ ಈತನಿಗೆ ಎಷ್ಟು ಕೆಟ್ಟದಾಗಿ ಥಳಿಸಿದ್ದಾರೆಂದರೆ, ಆಸ್ಪತ್ರೆಯ ಐಸಿಯು ಸೇರಿದ ಈತ ಬದುಕಿ ಉಳಿದದ್ದೇ ದೊಡ್ಡದು ಎಂದಿದ್ದಾರೆ ವೈದ್ಯರು.

ಎಡಗೈ ಆಟಗಾರ ಜೆಸ್ಸಿ ಡೇನಿಯಲ್ ರೈಡರ್ (ಬರ್ತ್‌ಡೇ 6-8-1984) ನ್ಯೂಜಿಲೆಂಡ್ ಕ್ರಿಕೆಟ್ ತಂಡಕ್ಕೆ ಬಹುದೊಡ್ಡ ಆಸ್ತಿ. 72 ಎಸೆತಗಳಲ್ಲಿ ಈತ ಬಾರಿಸಿದ 105 ರನ್, ಆ ತಂಡದ ಪರವಾಗಿ ಆಟಗಾರನೊಬ್ಬನ ಬಾರಿಸಿದ ಅತಿವೇಗದ ಮೂರನೇ ಶತಕ. ನೇಥಾನ್ ಆಸ್ಲ್ ಬಳಿಕ ಸತತ ಎರಡು ಟೆಸ್ಟ್‌ಗಳಲ್ಲಿ ಶತಕ ಬಾರಿಸಿದ ಖ್ಯಾತಿಯೂ ಈತನದ್ದು. (ಅದರಲ್ಲೂ ಒಂದು ದ್ವಿಶತಕ!)

2008ರಲ್ಲಿ ಇಂಗ್ಲೆಂಡ್ ವಿರುದ್ಧ ಟೆಸ್ಟ್ ತಂಡಕ್ಕೆ ಈತ ಆಯ್ಕೆಯಾದಾಗ 'ಈ ಢಡಿಯನಿಗೆ ಓಡೋದಕ್ಕೇ ಆಗಲ್ಲ, ಏಕೆ ಸೇರಿಸಿಕೊಳ್ತೀರಿ?' ಎಂದು ಆಯ್ಕೆ ಸಮಿತಿಯ ಕೆಲವರು ವಿರೋಧಿಸಿದ್ದರು. ಆದರೆ ಜೆಸ್ಸಿ, ಒಂದೇ ಸಮನೆ ಆಕ್ರಮಣಕಾರಿ ಆಟ ಪ್ರದರ್ಶಿಸಿದ. ಸತತ ನಾಲ್ಕು ವರ್ಷಗಳ ಆತನ ಆಟ (ನಡುವೆ ಕೆಲವು ಇಳಿತಗಳಿದ್ದರೂ) ಕಳೆಗುಂದಲೇ ಇಲ್ಲ. ಟೆಸ್ಟ್‌ನಲ್ಲಿ 49.33 ಮತ್ತು ಏಕದಿನ ಪಂದ್ಯದಲ್ಲಿ 34.33 ರನ್‌ಗಳ ಸರಾಸರಿ ದಾಖಲಿಸಿದ. ಅದರಲ್ಲೂ ಏಕದಿನದಲ್ಲಿ ಬ್ರೆಂಡನ್ ಮೆಕ್ಲೆಮ್ ಜತೆಗೂಡಿ ಹಲವು ಭರ್ಜರಿ ಓಪನಿಂಗ್ ನೀಡಿದ್ದಾನೆ ಜೆಸ್ಸಿ. ಟೆಸ್ಟ್‌ನಲ್ಲಿ ಮಧ್ಯಮ ಕ್ರಮಾಂಕದಲ್ಲಿ ಬಂದು ತಂಡವನ್ನು ಆಪತ್ತಿನಿಂದ ಪಾರು ಮಾಡಿದ್ದಾನೆ. ಮಧ್ಯಮವೇಗದ ಬಲಗೈ ಬೌಲರ್ ಆಗಿಯೂ ಗಮನ ಸೆಳೆದಿದ್ದಾನೆ.

ಆದರೆ ರನ್‌ಗಿಂತ ಹೆಚ್ಚಾಗಿ ಈತನ ಕುಡಿತವೇ ಸುದ್ದಿ ಮಾಡಿದ್ದು ವಿಪರ್ಯಾಸ. 2008ರಲ್ಲಿ ಟೆಸ್ಟ್‌ಗೆ ಆಯ್ಕೆಯಾದ ಎರಡನೇ ತಿಂಗಳಲ್ಲೇ ಈತ ಮರುದಿನ ಟೆಸ್ಟ್ ಆಡಬೇಕಿದ್ದವನು ಬೆಳಿಗ್ಗೆಯ ಜಾವ ಐದೂವರೆಗೆ ಬಾರ್ ಒಂದರ ಟಾಯ್ಲೆಟ್ ಬಾಗಿಲು ಒಡೆಯಲು ಹೋಗಿ ಎಡಗೈಗೆ ತೀವ್ರ ಗಾಯ ಮಾಡಿಕೊಂಡಿದ್ದ. ಅಲ್ಲಿಂದ ಆಸ್ಪತ್ರೆಗೆ ಹೋಗಿ ವೈದ್ಯರ ಜತೆಗೂ ಜಗಳಕ್ಕಿಳಿದಿದ್ದ! 2009ರಲ್ಲಿ ವಿಂಡೀಸ್ ಪ್ರವಾಸದ ವೇಳೆಗೆ, ಮೂರನೇ ಏಕದಿನ ಪಂದ್ಯದ ಮುಂಚಿನ ದಿನ ರಾತ್ರಿಯಿಡೀ ಬಾರ್‌ನಲ್ಲಿ ಕುಡಿದು ಬೆಳಿಗ್ಗೆ ತಂಡದ ಸಭೆ ಮತ್ತು ಮಧ್ಯಾಹ್ನದ ಆಟವನ್ನೂ ತಪ್ಪಿಸಿಕೊಂಡಿದ್ದ. ನಾಲ್ಕನೇ ಏಕದಿನ ಪಂದ್ಯಕ್ಕೆ ಆಯ್ಕೆಗಾರರೇ ಕೈಬಿಟ್ಟಿದ್ದರು. ಕುಡಿತದ ಚಟ ತ್ಯಜಿಸಲು ತಂಡವೇ ಹಲವು ಬಾರಿ ಈತನಿಗೆ ಚಿಕಿತ್ಸೆ ಕೊಡಿಸಿದ್ದಿದೆ. ಕಳೆದ ವರ್ಷ ಚಟದ ಚಿಕಿತ್ಸೆಗೆಂದೇ ಈತ ಕ್ರಿಕೆಟ್‌ನಿಂದ ದೂರವುಳಿದಿದ್ದ. ಈಗ ಐಪಿಎಲ್ ನಡೆಯುವ ಸಂದರ್ಭದಲ್ಲಿ ಡೆಲ್ಲಿ ಡೇರ್‌ಡೆವಿಲ್ ಪರವಾಗಿ ಆಡಬೇಕಿದ್ದ ಜೆಸ್ಸಿ ಆಸ್ಪತ್ರೆಯಲ್ಲಿ ಮಲಗಿದ್ದಾನೆ. ಡೆವಿಲ್ ಬಿಡಿ, ದೇವರು ಕೂಡಾ ನೆರವಿಗೆ ಬರುವುದು ಕಷ್ಟ!

# ಮಗನ ಬಂಡಾಯ



ಪಾಕಿಸ್ತಾನ ಪೀಪಲ್ಸ್ ಪಾರ್ಟಿಯ (ಪಿಪಿಪಿ) 'ಮಹಾಪೋಷಕ' (ಚೇರ್‌ಮನ್) ಬಿಲಾವಲ್ ಭುಟ್ಟೋ, ಚುನಾವಣೆಯ ಹೊಸ್ತಿಲಲ್ಲಿ ಅಪ್ಪ ಅಸಿಫ್ ಅಲಿ ಜರ್ದಾರಿ ಜತೆಗೆ ಕೋಪಿಸಿಕೊಂಡು ದೇಶ ಬಿಟ್ಟು ಹೋಗಿದ್ದಾನೆ! ಅಮ್ಮ ಬೆನಜೀರ್ ಭುಟ್ಟೊ ಸತ್ತ ಬಳಿಕ ಪಕ್ಷ ಕಟ್ಟಿ ಬೆಳೆಸಬೇಕಿದ್ದ ಮಗ ಹೀಗೆ ಕೋಪಿಸಿಕೊಂಡು ಹೋಗಿದ್ದಕ್ಕೆ ಪಕ್ಷದ ಕೋ ಚೇರ್‌ಮನ್ ಆಗಿರುವ ಅಪ್ಪ ಅಷ್ಟೇನೂ ಚಿಂತೆ ಮಾಡಿಕೊಂಡಂತೆಯೂ ಕಾಣುತ್ತಿಲ್ಲ! 'ಅಪ್ಪ ಮಗನ ಜಗಳ ಏನಿಲ್ಲ; ಬಿಲಾವಲ್‌ಗೆ ಅಲ್‌ಖೈದಾದವರು ಜೀವಬೆದರಿಕೆ ಹಾಕಿರುವ ಹಿನ್ನೆಲೆಯಲ್ಲಿ ಭದ್ರತೆಗಾಗಿ ಆತ ತಾತ್ಕಾಲಿಕವಾಗಿ ವಿದೇಶಕ್ಕೆ ಹೋಗಿದ್ದಾನೆ' ಎಂದು ಪಕ್ಷದ ವಕ್ತಾರರು ತಿಪ್ಪೆ ಸಾರಿಸಿದ್ದಾರೆ.

ಪಿಪಿಪಿ ಒಳಗೆ ಅಧಿಕಾರ ಗದ್ದುಗೆಗಾಗಿ ಮುಸುಕಿನ ಗುದ್ದಾಟ ನಡೆದಿದೆ ಎನ್ನುವುದು ಸ್ಪಷ್ಟ. 'ಸಿಂಧ್ ಪ್ರಾಂತ್ಯದಲ್ಲಿ ಈ 200 ಜನರಿಗೆ ಉದ್ಯೋಗ ಕೊಡಿಸಿ' ಎಂದು ಬಿಲಾವಲ್ ಅಲ್ಲಿನ ಮುಖ್ಯಮಂತ್ರಿ ಖೈಮ್ ಅಲಿ ಷಾಗೆ ಪಟ್ಟಿಯೊಂದನ್ನು ಕಳಿಸಿದ್ದನಂತೆ. ಆ ಪಟ್ಟಿಯನ್ನು ತಿರಸ್ಕರಿಸಲು ಬಿಲಾವಲ್‌ನ ಸೋದರತ್ತೆ ಫರ್ಯಾಲ್ ತಾಲ್ಪುರ್ ಮುಖ್ಯಮಂತ್ರಿಗೆ ಆದೇಶ ನೀಡಿದರಂತೆ. ದೇಶದ ಅಧ್ಯಕ್ಷರ ಮಗ ಹೇಳಿದ್ದನ್ನು ಕೇಳುವ ಬದಲು ಅಧ್ಯಕ್ಷರ ಸೋದರಿ ಹೇಳಿದ್ದನ್ನೇ ಆ ಮುಖ್ಯಮಂತ್ರಿ ಪಾಲಿಸಿದ್ದು ಸದ್ಯದ ಜಗಳದ ಮೂಲವಂತೆ!

ಬಿಲಾವಲ್ ಭುಟ್ಟೊಗೆ ವಯಸ್ಸು ಇನ್ನೂ 24. ಮುಂದಿನ ಸೆಪ್ಟೆಂಬರ್‌ಗೆ 25 ತುಂಬಿದರೆ ಆತ ದೇಶದ ಸಂಸತ್ ಚುನಾವಣೆಗೂ ಸ್ಪರ್ಧಿಸುವ ಅರ್ಹತೆ ಪಡೆಯುತ್ತಾನೆ. ಈಗಾಗಲೆ ವಿದೇಶಾಂಗ ಸಚಿವ ಹಿನಾ ರಬ್ಬಾನಿ ಜತೆಗಿನ 'ಪ್ರೇಮಪ್ರಕರಣ'ದಲ್ಲಿ ಪಕ್ಷಕ್ಕೆ ಮುಜುಗರ ಉಂಟು ಮಾಡಿರುವ ಈ ಸ್ಫುರದ್ರೂಪಿ ತರುಣನಿಗೆ ಅವಸರ ಹೆಚ್ಚು ಎನ್ನುವುದು ಬಲ್ಲವರ ಮಾತು. ಏಪ್ರಿಲ್ 4ರಂದು ಪಕ್ಷದ ಚುನಾವಣಾ ಪ್ರಚಾರ ಶುರುವಾಗಲಿದೆ. ಬಿಲಾವಲ್ ಪ್ರಚಾರಕ್ಕೆ ಬರಬಹುದೆ?

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65